ವರಾತ ಹಿಡಿದು ಮೂಲೆಯಲ್ಲಿ ಸಿಂಬಳ ಸುರಿಸುತ್ತ ಕೂತ ಐದು ವರ್ಷದ ಮಗಳು – ಇವೆಲ್ಲ ಕೂಡಿಕೊಂಡು ಹೆಂಡತಿ ಹುಚ್ಚಾಗುವಳು. ಅವಳ ಕೂದಲು ಯಾವಾಗಲೂ ಕೆದರಿರುವುದು. 'ನಿಮ್ಮ ಒಣಗರ್ವಕ್ಕಷ್ಟು ಬೆಂಕಿ ಹಾಕ' ಎಂದು ಗಂಡನ ಮೇಲೆ ಗೊಣಗುತ್ತ ಅವಳು ಒಮ್ಮೆ ತನ್ನ ಮಗಳ ತುಟಿ ಹರಿದು ರಕ್ತ ಸೋರುವಷ್ಟು ಬಿರುಸಾಗಿ ಅವಳ ಮೂತಿಯನ್ನು ಹಿಂಡಿದ್ದುಂಟು. ಇಷ್ಟೊಂದು ರಂಪದಲ್ಲೂ ಕೃಷ್ಣಪ್ಪನ ಮನಸ್ಸು ನಿರ್ವಿಕಾರವಾಗಿಬಿಡುವುದೂ ಇಲ್ಲವೆಂದಲ್ಲ. ಅವನ ಜೀವನಚರಿತ್ರೆ ಬರೆಯಲೆಂದು ನಿತ್ಯ ಬರುತ್ತಿದ್ದ ಭೋಳೆ ಸ್ವಭಾವದ ನಾಗೇಶನಿಗೆ ಕೃಷ್ಣಪ್ಪ ತನ್ನ ಹಿಂದಿನ ಕಥೆ ಹೇಳಲು ಶುರು ಮಾಡುವ. ತನ್ನ ಸದ್ಯದ ಸ್ಥಿತಿಯನ್ನು ಅರಿಯುವುದಕ್ಕಾಗಿ ಅವನು ಹೇಳಿಕೊಳ್ಳುತ್ತಿದ್ದುದರ ಆಳ ಅಗಲ ಎಳೆಯನಾದ ನಾಗೇಶನಿಗೆ ತಿಳಿಯುತ್ತಿತ್ತೊ ಇಲ್ಲವೊ ಎಂಬುದು ಕೃಷ್ಣಪ್ಪನ್ನೇನೂ ಬಾಧಿಸಿದಂತೆ ಕಾಣುವುದಿಲ್ಲ.

ಬಾಲಕನಾಗಿದ್ದಾಗ ಕೃಷ್ಣಪ್ಪನಿಗೆ ದನ ಕಾಯುವ ಕೆಲಸ. ಕಂಬಳಿಕೊಪ್ಪೆ ಹಾಕಿಕೊಂಡು ಕೈಯಲ್ಲೊಂದು ಕತ್ತಿ ಕೊಳಲು ಹಿಡಿದು ತನ್ನ ಹಳ್ಳಿಯ ದನಗಳನ್ನೆಲ್ಲ ಮೇಯಿಸಿಕೊಂಡು ಬರುತ್ತಿದ್ದ ಕಥೆಯನ್ನವನು ಅದರಲ್ಲೇನೋ ತನಗೆ ಮಾತ್ರ ತಿಳಿಯುವ ಅರ್ಥಗಳು ತುಂಬಿವೆ ಎನ್ನುವಂತೆ ಹೇಳುವುದು. ಸಾಯುತ್ತಿರುವ ಅವನಿಗೆ ತನ್ನ ಹಿಂದಿನ ಬದುಕಿನಲ್ಲಿ ಆಗೀಗ ದಿವ್ಯವಾದದ್ದು ಪ್ರವೇಶಿಸಿದ್ದಿದೆ ಎಂದು ಈಗ ಅನ್ನಿಸುವುದು ವಸ್ತುನಿಷ್ಠ ಸತ್ಯವೋ, ಅಥವಾ ಅಂಥ ನಂಬಿಕೆ ಸದ್ಯದ ಕ್ಷುದ್ರದೆಸೆಯನ್ನು ಗೆಲ್ಲಲು ಅಗತ್ಯವೋ ಹೇಗೆ ಹೇಳುವುದು? ವೈಚಾರಿಕವಾಗಿ ಕೃಷ್ಣಪ್ಪ ನಿರೀಶ್ವರವಾದಿ; ಜೊತೆಗೇ, ಕಬೀರ, ಅಲ್ಲಮ, ನಾನಕ, ಮೀರ, ಪರಮಹಂಸ ಇತ್ಯಾದಿ ದೈವಿಕ ತಲೆತಿರುಕರನ್ನು ಮೆಚ್ಚುಗೆ ಹಾಸ್ಯ ಅನುಮಾನಗಳಿಂದ ಅವರೆಲ್ಲ ತನಗೆ ಪರಮ ಆಪ್ತರೆಂಬಂತೆ ಕಿಚಾಯಿಸುವವನು. ಆದ್ದರಿಂದ ಅವನ ಒಟ್ಟು ನಿಲುವೇನು ಎಂದು ಹೇಳುವುದು ಕಷ್ಟದ ವಿಷಯವೇ. ಹುಡುಗಾಟಿಕೆಯಲ್ಲಿ ಬೆಳಗಿನ ಜಾವ ಮನೆಯ ಎದುರು ನಿಂತು ದನಕರುಗಳನ್ನು ಬಿಡಿಸಿಕೊಂಡು, ಗುಡ್ಡ ಹೊಳೆ ಬಯಲುಗಳಲ್ಲಿ ಅವುಗಳನ್ನು ಮೇಯಿಸುತ್ತ ಓಡಾಡಿಸಿಕೊಂಡಿದ್ದು, ಸಂಜೆ ಹಿಂದಕ್ಕೆ ಹೊಡೆದುಕೊಂಡು ಬರುವುದು. ಮರದ ಕೆಳಗೆ ಕೂತು ಆಲಸ್ಯದ ಕಣ್ಣುಗಳಲ್ಲಿ ಮೇಯುವ ದನಗಳನ್ನು ಗಮನಿಸುತ್ತ, ಕೊಳಲಿನಲ್ಲಿ ತನ್ನ ಮನಸ್ಸಿನ ಲಹರಿಯನ್ನು ನುಡಿಸುತ್ತ ತಾನೇನು ಯೋಚಿಸುತ್ತಿದ್ದೆ ಆಗ ಎಂಬುದನ್ನವನು ನೆನಪು ಮಾಡಿಕೊಳ್ಳಲು ಪ್ರಯತ್ನಿಸುವಾಗ ಒಂದು ಮುಖ್ಯ ಘಟನೆ ಅವನ ಕಣ್ಣೆದುರು ನಿಲ್ಲುತ್ತದೆ. ಅದನ್ನು ಹೇಳುವ ಮುಂಚೆ ಇದ್ದಕ್ಕಿದ್ದಂತೆ ಅವನು 'ಮಾರಾಯರೆ – ಆಗ ನಾನೇನೊ ಸುಖವಾಗಿದ್ದೆನೆಂತ ತಿಳೀಬೇಡಿ – ಗದ್ದೇಲಿ ಹಸಿರು ಕಾಣಿಸ್ತು ಅಂದರೆ ನನ್ನ ಕಥೆ ಮುಗೀತು ಅಂತ ತಿಳಿಕೊಳ್ಳಿ. ದನಕರುಗಳು ಹುಚ್ಚೆದ್ದು, ಬೇಲಿ ಗೀಲಿ ಕಿತ್ತು ನುಗ್ಗಿ ಬಿಡ್ತಿದ್ದುವು ಗದ್ದೆಗೆ. ನಾನೊಬ್ಬನೆ ತಲೆ ಕೆಟ್ಟವನ ಹಾಗೆ ಅವುಗಳನ್ನು ಅಟ್ಟುತ್ತ ಕೊನೆಗೆ ಕೈಸಾಗದೆ ಕೂತುಬಿಡ್ತಿದ್ದೆ – 'ಧೋ' ಎಂಬ ಮಳೆಯಲ್ಲಿ ಮಂಕು ಬಡಿದವನ ಹಾಗೆ. ಬೀಳ್ತಿತ್ತು ನೋಡಿ ಆಗ ಬೆನ್ನ ಮೇಲೆ' – ಹೇಳುತ್ತ ಕೃಷ್ಣಪ್ಪ ನಗುತ್ತಾನೆ ಈಗ. ಕಣ್ಣುಗಳಲ್ಲಿ ಆಗಿನ ದಿಗಿಲನ್ನೂ ಬೀಳುತ್ತಿದ್ದ ಪೆಟ್ಟುಗಳ ನೋವನ್ನೂ ನಟಿಸಿ ತೋರಿಸುತ್ತಾನೆ. ಇದನ್ನು ನೆನೆಸುತ್ತಿದ್ದಂತೆ ದನ ಕಾಯುವುದರಿಂದ ತನ್ನನ್ನು ಪಾರು ಮಾಡಿದ ಮಹೇಶ್ವರಯ್ಯ ಅವನಿಗೆ ನೆನಪಾಗುತ್ತಾರೆ.

ಮಹೇಶ್ವರಯ್ಯ ಯಾರೋ ಎತ್ತ ಕಡೆಯವರೋ ತಿಳಿಯದು. ಯಾವುದೋ ಊರಿಗೆ ಬರುತ್ತಾರೆ ಅನ್ನಿ. ಮನೆ ಗಿನೆ ಓರಣ ಮಾಡಿಕೋತಾರೆ. ಇರುವುದು ಒಬ್ಬರೇ ಆದರೂ



ಅಡಿಗೆಯವನನ್ನು ಇಟ್ಟುಕೊಳ್ಳುತ್ತಾರೆ. ತನ್ನ ಬಟ್ಟೆ ಮಾತ್ರ ತಾನೇ ಒಗೆದುಕೊಳ್ಳುತ್ತಾರೆ. ಅವರ ಬಾಯಿಂದ ಕಾಳಿದಾಸನ ಸಂಸ್ಕೃತ ಕೇಳಬೇಕು, ಹಿಂದೂಸ್ತಾನಿ ಗಾಯನ ಕೇಳಬೇಕು – ದೊಡ್ಡ ರಸಿಕ. ತಾಂಬೂಲದಿಂದ ಕೆಂಪಾದ ಅವರ ತುಟಿಗಳ ಮೇಲಿನ ಗಿರಿಜಾ ಮೀಸೆ, ಅವರ ಕಿವಿಯಲ್ಲಿನ ಹೊಳೆಯುವ ವಜ್ರದ ಒಂಟಿಗಳು, ಅವರ ಮುಚ್ಚುಕೊಟು, ಶುಭ್ರವಾದ ಕಚ್ಚೆ ಹಾಕಿದ ಪಂಚೆ, ಅವರು ಹಿಡಿದ ಬೆಳ್ಳಿ ಕಟ್ಟಿದ ಬೆತ್ತ, ಅವರ ಕಣ್ಣಿನ ಪ್ರಶಾಂತ ಭಾವ – ಇತ್ಯಾದಿಗಳನ್ನು ವಿವರಿಸುತ್ತಿದ್ದಂತೆಯೇ ಅವರು ದೊಡ್ಡ ವಿರಾಗಿಗಳು ಎಂದೂ ಕೃಷ್ಣಪ್ಪ ಹೇಳುತ್ತಾನೆ. ಅವರು ಸ್ಪಷ್ಟ ಹೇಳಿಕೊಂಡಿರದಿದ್ದರೂ ಕೃಷ್ಣಪ್ಪನ ಊಹೆ ಅವರ ಹೆಂಡತಿ ಯಾರನ್ನೋ ಇಟ್ಟುಕೊಂಡಿದ್ದು ತಿಳಿದು ಮಹೇಶ್ವರಯ್ಯ ಮನೆ ಬಿಟ್ಟಿದ್ದು ಎಂದು. ಲಕ್ಷಾಧೀಶ ಮನುಷ್ಯ ಹೆಂಡತಿಗಷ್ಟು ಆಸ್ತಿ ಬಿಟ್ಟು ಉಳಿದ ಹಣ ಬ್ಯಾಂಕಲ್ಲಿಟ್ಟು ಹೀಗೆ ನಿವೃತ್ತರಾಗಿ ಊರೂರು ಅಲೆಯುತ್ತಿದ್ದರು. ಯಾವಾಗಲೂ ಓದುತ್ತಿರುತ್ತಿದ್ದರು. ಆತ ತ್ರಿಕಾಲಜ್ಞಾನಿಯೆಂದು ಕೃಷ್ಣಪ್ಪನ ನಂಬಿಕೆ. ಮಹೇಶ್ವರಯ್ಯ ಎಲ್ಲಾದರೂ ಬಂದರು ಎನ್ನಿ. ಬಂದು ಕೂತವರು ಇದ್ದಕ್ಕಿದ್ದಂತೆ 'ಭೋ' ಎನ್ನುವುದುಂಟು. ಆಗ ಅವರ ಮುಖದಲ್ಲಿ ಕಳವಳ ಕಾಣಿಸಿಕೊಳ್ಳುತ್ತದೆ. ಅವರನ್ನು ಕರೆದವರು ಎಷ್ಟು ಒತ್ತಾಯ ಮಾಡಿದರೂ ಹೇಳುವುದಿಲ್ಲ. ಮುಂದಾಗುವ ಅನಿಷ್ಟ ಅವರಿಗೆ ಗೊತ್ತಾಗಿರುತ್ತದೆ. ಅದನ್ನು ಆಮೇಲೆ ಕಿವಿಯಲ್ಲಿ ಕಷ್ಣಪ್ಪನಿಗೆ ಹೇಳುತ್ತಿದ್ದರು. ಅವರನ್ನು ಕಂಡರೆ ಎಲ್ಲಿ ಅವರು 'ಭೋ' ಎಂದುಬಿಡುವರೋ ಎಂದು ಜನ ಹೆದರುತ್ತಿದ್ದರು. ಹಾಗೆ ಅನ್ನದೆ ಕೂಡ ಅವರು ಇರಲಾರರು. ಆದ್ದರಿಂದಲೇ ಬನ್ನಿ ಎಂದರೆ ಮಹೇಶ್ವರಯ್ಯ 'ಆ ಗೃಹಸ್ಥನಿಗೆ ಏನು ಅನಿಷ್ಟ ಕಾದಿದೆಯೊ ಗೊತ್ತಿಲ್ಲಯ್ಯ – ಆದ್ದರಿಂದ ನಾನು ಅವನ ಮನೆಗೆ ಬರಲ್ಲ' ಎಂದು ಬಿಡುತ್ತಿದ್ದರು.

ಮುಂದಿನ ಅನಿಷ್ಟ ಕಂಡು 'ಭೋ' ಅನ್ನುತ್ತಿದ್ದ ಮಹೇಶ್ವರಯ್ಯನ ದುರಂತವೆಂದರೆ ಅವರಿಗೆ ಭವಿಷ್ಯದಲ್ಲಿ ಒಳ್ಳೆಯದು ಕಾಣಿಸುತ್ತಿದ್ದುದೇ ತೀರ ಅಪರೂಪ. ಕೃಷ್ಣಪ್ಪನ ಬಗ್ಗೆ ಮಾತ್ರ ಅವರು ಒಮ್ಮೆ ಒಳ್ಳೆಯದನ್ನು ಕಂಡದ್ದುಂಟು. ಅದು ನಡೆದದ್ದು ಹೀಗೆ:

ಕೊಳಕು ಚಡ್ಡಿ ಬನೀನು ಹಾಕಿಕೊಂಡು ಹೊಳೆದಂಡೆಯ ಅಶ್ವತ್ಥಮರದ ಕೆಳಗೆ ಕೃಷ್ಣಪ್ಪ ಕೂತಿದ್ದ. ಕೊಯಿಲು ಮುಗಿದಿದ್ದರಿಂದ ಅವನಿಗೆ ದನಗಳು ಗದ್ದೆ ನುಗ್ಗುವ ಭಯವಿರಲಿಲ್ಲ. ನದಿಯ ಝುಳಝುಳ ಶಬ್ದ, ದನಗಳ ಕೊರಳಿನ ಗಂಟೆ ಇವುಗಳು ಕಿವಿಯ ಮೇಲೆ ಬೀಳುತ್ತಲಿದ್ದಾಗ ಕೃಷ್ಣಪ್ಪನಿಗೆ ಖುಷಿಯಾಗಿರಬೇಕು. ಎಂದಿಗಿಂತ ಹೆಚ್ಚು ಖುಷಿಯಾಗಿರಬೇಕು. ಕೊಳಲನ್ನೂದುವ ಬದಲು ಕುಮಾರವ್ಯಾಸ ಭಾರತ ಹಾಡಬೇಕೆನ್ನಿಸಿತು. ನಾಲ್ಕು ವರ್ಷ ಸ್ಕೂಲಿಗೆ ಹೋಗಿದ್ದ ಕೃಷ್ಣಪ್ಪ ಭಾರತವನ್ನು ಓದಿ ಕಲಿತದ್ದಲ್ಲ; ಅವನ ಮಾಸ್ತರರಾಗಿದ್ದ ಜೋಯಿಸರು ಓದುವುದನ್ನು ಆಗೀಗ ಕೇಳಿ ಕಲಿತದ್ದು. ಭಾವವಶವಾಗಿ ಹಾಡಿಕೊಳ್ಳಲು ಪ್ರಾರಂಭಿಸಿದ. ಅವನ ಹಳ್ಳಿಯ ಹತ್ತಿರದ ಪೇಟೆಯೊಂದರಲ್ಲಿ ಆಗ ಬೀಡುಬಿಟ್ಟಿದ್ದ ಮಹೇಶ್ವರಯ್ಯ ತಮ್ಮ ಕೋಟನ್ನು ಒಗೆಯುತ್ತ ನದಿಯಲ್ಲಿ ಇದ್ದರು. ಅವರು ಅಲ್ಲಿಗೇ ಯಾಕೆ ಒಗೆಯಲು ಬಂದಿದ್ದರೆಂಬುದೂ ಆಶ್ಚರ್ಯ. ಅವತ್ತು ಬೆಳಿಗ್ಗೆ ಅವರು ಪೇಟೆಯಲ್ಲಿ ನಡೆಯುತ್ತಿದ್ದಾಗ ಅರೆಹುಚ್ಚನಾಗಿಬಿಟ್ಟಿದ್ದ ನಿವೃತ್ತ ಶಾಲಾ ಮಾಸ್ತರನೊಬ್ಬ ಅವರನ್ನು ನಿಲ್ಲಿಸಿದನಂತೆ. ಕೋಟನ್ನು ಬೇಡಿದನಂತೆ. 'ಕೊಡ್ತೀನಿ ಮಾರಾಯರೆ. ಆದರೆ ತೊಟ್ಟಿದ್ದಲ್ಲವೆ? ಒಗೀಬೇಕು' ಎಂದು ಸೋಪುಕೊಂಡು ಹಾಗೇ ನಡೆಯುತ್ತ ಈ ಹೊಳೆಯ ಈ ದಂಡೆಗೆ ಬಂದಿದ್ದರಂತೆ. ಎರಡು ಮೈಲಿಯಾದರೂ ಆಗತ್ತೆ ಪೇಟೆಗೂ, ಈ ನದಿಗೂ.